## ಕಾರೇಮುಳ್ಳಿನ ಮೇಲೆ ನಡಿಗೆ!



ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ದಸರೀಘಟ್ಟ ಗ್ರಾಮದಲ್ಲಿ ಪ್ರತಿ ವರ್ಷ ವಿಜಯದಶಮಿಯ ದಿನದಂದು ಗ್ರಾಮದೇವತೆ ಚೌಡೇಶ್ವರಿಯ 'ಮುಳ್ಳು ಗದ್ದಿಗೆ' ಎಂಬ ಆಚರಣೆ ನಡೆಯುತ್ತದೆ. ರಾಶಿ ಹಾಕಿದ ಕಾರೇಮುಳ್ಳುಗಳ ಮೇಲೆ ದೇವರು ಹೊತ್ತವರು ಮೊದಲು ನಡೆಯುತ್ತಾರೆ. ಆನಂತರ ಇಲ್ಲಿ ಸೇರುವ ನೂರಾರು ಭಕ್ತರು ನಡೆದು ಹೋಗಿ ಸಂಭ್ರಮ ಪಡುತ್ತಾರೆ.

ಆ ದಿನ ಈ ಗ್ರಾಮದ ಜನರು ಕಾಡಿಗೆ ತೆರಳಿ ಕಾರೇ ಮುಳ್ಳುಗಳನ್ನು ಕಡಿದು ನಾಲ್ಕು ಟ್ರಾಕ್ಟರ್ ತುಂಬಾ ಮುಳ್ಳುಗಳನ್ನು ತಂದು ದೇವಾಲಯದ ಆವರಣದಲ್ಲಿ ರಾಶಿ ಹಾಕುತ್ತಾರೆ. ಅನಂತರ ಈ ಮುಳ್ಳಿನ ರಾಶಿಗೆ ಅರ್ಚಕರು ಬಂದು ಪೂಜೆ ಮಾಡುತ್ತಾರೆ. ನಂತರ ನಾಲ್ಕು ಜನ ಭಕ್ತರು ಚೌಡೇಶ್ವರಿಯ ಉತ್ಸವ ಮೂರ್ತಿಯನ್ನು ತಮ್ಮ ಹೆಗಲ ಮೇಲೆ ಹೊತ್ತು, ಆವೇಶಭರಿತವಾಗಿ ಮುಳ್ಳಿನ ರಾಶಿಯ ಮೇಲೆ ಹತ್ತಿ ನಡೆದು ಬರುತ್ತಾರೆ.

**-ಡಿ.ಎನ್.ಮಂಜುನಾಥ, ಬೆಂಗಳೂರು**

## ಶಾಸ್ತ್ರಿ ಬಳಸಿದ್ದ ಕರಣೆ



ಸಾಗರದ ಮಲೆನಾಡು ಅಭಿವೃದ್ಧಿ ಪ್ರತಿಷ್ಠಾನವು 1964 ರಲ್ಲಿ ಮಹಾವಿದ್ಯಾಲಯವನ್ನು ಸ್ಥಾಪಿಸುವಾಗ ಅದರ ಕಟ್ಟಡದ ಅಡಿಪಾಯಕ್ಕೆ ಶಿಲಾನ್ಯಾಸ ಮಾಡಿ ಅಡಿಪಾಯಕ್ಕೆ ಗಾರೆ ಹಾಕಿದ್ದು ನಮ್ಮ ದೇಶದ ಹೆಮ್ಮೆಯ ಪ್ರಧಾನಿಯಾಗಿದ್ದ ದಿವಂಗತ ಲಾಲ್ ಬಹದ್ದೂರ್ ಶಾಸ್ತ್ರಿಯವರು. ಶಾಸ್ತ್ರಿಗಳ ಮರಣದ ನಂತರ ಅವರ ಸ್ಮರಣಾರ್ಥ ಈ ಕಾಲೇಜಿಗೆ ಅವರ ಹೆಸರನ್ನೇ ಇಟ್ಟು, ಅವರ ಶಿಲಾ ಪುತ್ಥಳಿಯನ್ನು ಕಾಲೇಜಿನ ಮುಂಭಾಗದಲ್ಲಿ ಸ್ಥಾಪಿಸಲಾಗಿದೆ. ಅಲ್ಲದೆ ಇಂದಿಗೂ ಕಾಲೇಜಿನಲ್ಲಿ ಶಾಸ್ತ್ರೀಜಿ ಅಡಿಪಾಯಕ್ಕೆ ಗಾರೆ ಹಾಕಲು ಬಳಸಿದ್ದ ಬೆಳ್ಳಿಯ ಕರಣೆಯನ್ನು ಕಾಪಿಡಲಾಗಿದೆ.

**-ಅಂಜನ್ ಕಾಯ್ಕಿಣಿ, ಸಾಗರ**

## ಗಿಲಿಗಿಲಿ ಗಿಲಿಕೆ!



ಇದು ಅಂತಿಂತಹ ಗಿಲಿಕೆಯಲ್ಲ ! ಇದರ ಮಧುರವಾದ ಗಿಲಿಗಿಲಿ ಸದ್ದಿಗೆ ಮಕ್ಕಳ ಅಳುವನ್ನೇ ನಿಲ್ಲಿಸುವ ಮಾಂತ್ರಿಕ ಶಕ್ತಿಯಿತ್ತು. ಮಕ್ಕಳಿಗಷ್ಟೇ ಅಲ್ಲ, ತಾಯಂದಿರಿಗೂ ಇದರ ಬಗ್ಗೆ ಅಪಾರ ಮಮತೆ. ಎಂಟು ಮುಖ ಹೊಂದಿರುವ ಈ ಗಿಲಿಕೆಯನ್ನು ಇಷ್ಟೊಂದು ನಾಜೂಕಾಗಿ ತಯಾರಿಸಿರುವವರ ಕೌಶಲ್ಯವನ್ನು ಮೆಚ್ಚಲೇಬೇಕು. ಮರದ ಎಂಟು ಚಿಕ್ಕ ಚಿಕ್ಕ ಪಟ್ಟಿಗಳನ್ನು ಒಂದನ್ನೊಂದು ಬೆಸೆದಿರುವ ರೀತಿ ಅಚ್ಚರಿ ಮೂಡಿಸುವಂತಿದೆ. ಹಿಡಿದುಕೊಳ್ಳಲು ನಯವಾದ ನುಣುಪಾದ ಬಿದಿರು ಹಿಡಿಕೆಯಿದೆ. ಐದಾರು ದಶಕಗಳಷ್ಟು ಹಳೆಯದು ಈ ಅಷ್ಟಮುಖಿ ಆಟಿಕೆ.

**-ಮ.ಗು.ಬಸವಣ್ಣ, ನಂಜನಗೂಡು**